ಮಧ್ಯಂತರ ಆದೇಶವಾಗಿ ಹೊರಡಿಸಲಾಗಿರುತ್ತದೆ. Government, Department is waiting for final order.

SRI QAMARUL ISLAM : Through the Hon'ble Speaker I wantto request that the interim order of the Supreme court has to be implemented.

MR.SPEAKER : It is only a calling attention. An opportunity has been given. Every time in each and every session.....

(Interruption)

SRI QAMARUL ISLAM : I request you that the order be implemented.

ಅಧ್ಯಕ್ಷರು : ಶ್ರೀ ಸಿ.ಎಸ್. ನಾಡಗೌಡರವರೆ, ತಾವು ಕೇಳಿ.

(5) ವಿಷಯ :– 2010–11ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಿ–ದಂತೆ ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ಬ್ಯಾಂಕಿನಿಂದ ಪಡೆದ ಶೈಕ್ಷಣಿಕ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಡುವ ಬಗ್ಗೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಅಧ್ಯಕ್ಷರೆ, ನಾನು ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)(ಮಾನ್ಯ ಉನ್ನತ ಶಿಕ್ಷಣ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ಬ್ಯಾಂಕಿನಿಂದ ಪಡೆದ ಶೈಕ್ಷಣಿಕ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವುದಕ್ಕಾಗಿ 2010–11ನೇ ಸಾಲಿನ ಆಯವ್ಯದಲ್ಲಿ ರೂ.400.00 ಲಕ್ಷಗಳನ್ನು ಒದಗಿಸಲಾಗಿದ್ದು, ಈ ಮೊತ್ತವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿದೆ. ರಾಜ್ಯದಲ್ಲಿನ ಬಡ ಮತ್ತು ಕಡಿಮೆ ಆದಾಯದ ಕುಟುಂಬಗಳಿಂದ ಬಂದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಸೌಲಭ್ಯದಿಂದ ವಂಚಿತರಾಗುವುದನ್ನು ತಪ್ಪಿಸಲು, ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ವೃತ್ತಿ ಶಿಕ್ಷಣ ಕೋರ್ಸುಗಳಿಗೆ

ಸೇರಲು ಶೈಕ್ಷಣಿಕ ಸಾಲವನ್ನು ಶೇ.6ರ ದರದಲ್ಲಿ ಪಡೆಯಲು 2008–09ನೇ ಸಾಲಿನಿಂದ ಸರ್ಕಾರದ ಆದೇಶ ಸಂಖ್ಯೆ: ಇಡಿ 197 ಯೋಯೋಕ 2008, ದಿನಾಂಕ:08.09.2008 ರಂತೆ ಕೆಳಕಂಡ ನಿಬಂಧನೆಗೊಳಪಟ್ಟು ಜಾರಿಗೊಳಿಸಲಾಗಿದೆ.

(1) ವಿದ್ಯಾರ್ಥಿಗಳು ಪಡೆಯುವ ಶೈಕ್ಷಣಿಕ ಸಾಲದ ಮೇಲೆ ಬ್ಯಾಂಕುಗಳು ವಿಧಿಸುವ ಬಡ್ಡಿಯಲ್ಲಿ ಶೇ.6ರಷ್ಟು ಹಣವನ್ನು ವಿದ್ಯಾರ್ಥಿಗಳು ಪಾವತಿಸಬೇಕು, ಉಳಿದ ಬಡ್ಡಿ ಹಣವನ್ನು ಸರ್ಕಾರವು ವಿದ್ಯಾರ್ಥಿಯ ಪರವಾಗಿ ಬ್ಯಾಂಕಿಗೆ ನೇರವಾಗಿ ಜಮಾ ಮಾಡುತ್ತದೆ.

(2) ಬಡ್ಡಿ ಸಹಾಯಧನವನ್ನು ವ್ಯಾಸಂಗದ ಅವಧಿಗೆ ಮಾತ್ರ ಪಾವತಿಸಲಾಗುವುದು.

ವಿದ್ಯಾರ್ಥಿಗಳು ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಶೈಕ್ಷಣಿಕ ಸಾಲಗಳ ಮೇಲೆ ಸಬ್ಸಿಡಿ ಹಣ ಬಿಡುಗಡೆ ಮಾಡುವ ಬಗ್ಗೆ ಬ್ಯಾಂಕುಗಳು ಪ್ರಸ್ತಾವನೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸಲ್ಲಿಸಲಿದ್ದು ಪರಿಶೀಲಿಸಿದ ನಂತರ ಬಡ್ಡಿ ಸಹಾಯಧನವನ್ನು ನೇರವಾಗಿ ವಿದ್ಯಾರ್ಥಿಯ ಸಾಲದ ಖಾತೆಗೆ ಜಮಾ ಮಾಡಲು ಆಯಾ ಬ್ಯಾಂಕುಗಳಿಗೆ ಕಳುಹಿಸಿ ಕೊಡಲಾಗುವುದು.

ಈವರೆಗೆ ಬಡ್ಡಿ ಸಬ್ಸಿಡಿಯನ್ನು ಪಾವತಿಸಿರುವ ವಿವರಗಳು ಕೆಳಕಂಡಂತಿದೆ.

ಶೈಕ್ಷಣಿಕ ವರ್ಷ	ಬಡ್ಡಿ ಸಹಾಯಧನ ಪಡೆದ ವಿದ್ಯಾರ್ಥಿಗಳ ಸಂಖ್ಯೆ	ಬಡ್ಡಿ ಸಹಾಯಧನ ಬಿಡುಗಡೆ ಮಾಡಿರುವ ಮೊತ್ತ(ರೂ)
2009–10	2679	22,91,397/–
2010–11	4434	96,37,212/–
2011–12	664	9,08,214/–
2012–13	911	39,80,292/–
	ಒಟ್ಟು	**1,68,17,115**

ಅಧ್ಯಕ್ಷರು : ಏನಾದರೂ clarifications ಇದ್ದರೆ ಕೇಳಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಯಲ್ಲಿ ನಾನೇನು ಗಮನ ಸೆಳೆಯುವುದಕ್ಕೆ ಬಯಸುತ್ತೇನೆಂದರೆ 2010–11ನೇ ಸಾಲಿನಲ್ಲಿ ಆಯವ್ಯಯದಲ್ಲಿ ಪ್ರಸ್ತಾಪಿಸಿದ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕಾಗಿ

ಬ್ಯಾಂಕಿನಿಂದ ಪಡೆದ ಶೈಕ್ಷಣಿಕ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆದಿದ್ದೆ. ನೀವು 2010–11ರಲ್ಲಿ 4 ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ, ಆದರೆ ಅವರು ಬಿಡುಗಡೆ ಮಾಡಿರುವ ಪಟ್ಟಿಯನ್ನು ಇಲ್ಲಿ ಕೊಟ್ಟಿದ್ದಾರೆ. ಇವತ್ತು ನಾವು higher education ಗೆ ಜಾಸ್ತಿ ಒತ್ತು ಕೊಡಬೇಕೆಂದು ನಮ್ಮ ಕಳಕಳಿಯಿದೆ. ಬಹಳಷ್ಟು ಬಡ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್, ಮೆಡಿಕಲ್, ಎಂ.ಬಿ.ಎ. ದಂಥ ಸೀಟುಗಳು ಸಿಕ್ಕಾಗ ಅವರು ಬ್ಯಾಂಕಿನಿಂದ ಪಡೆದಿರುವಂಥ ಸಾಲದ ಹೊರೆಯನ್ನು ಅವರಿಗೆ ಹೊರುವುದಕ್ಕೆ ಆಗುತ್ತಿಲ್ಲ. ಅದಕ್ಕಾಗಿ ಸರ್ಕಾರ ಸಹಾಯಕ್ಕೆ ಬರುತ್ತೇವೆಂದು ಹೇಳಿ 2010–11ನೇ ಸಾಲಿನಲ್ಲಿ ಘೋಷಣೆ ಮಾಡಿದ್ದರು. ಏಕೆಂದರೆ meritorious students ಗೆ ಬ್ಯಾಂಕಿನಿಂದ ಸಾಲ ತೆಗೆದುಕೊಂಡಂಥವರಿಗೆ, ಬಡ್ಡಿ ನಾವು ಪಾವತಿ ಮಾಡುತ್ತೇವೆಂದು ಹೇಳಿದ್ದರು. ಈ ಕಾರಣಕ್ಕಾಗಿ 4 ಕೋಟಿ ರೂಪಾಯಿಗಳನ್ನು 2010–11ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ್ದರು. ಆದರೆ ನಾವು ಇಲ್ಲಿ ನೋಡಿದರೆ 2009–10, 2010–11, 2011–12 ಮತ್ತು 2013–14 ಈ 4 ವರ್ಷಗಳಲ್ಲಿ ಕೇವಲ 2 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಸರ್ಕಾರದ ಕಳಕಳಿ ಒಂದು ವೇಳೆ ಬಡ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಮಾಡಬೇಕೆಂದು ಇದ್ದಿದ್ದರೆ ನೀವು ಸಂಪೂರ್ಣವಾಗಿ ಯಾರ್ಯಾರು ಲೋನ್ ತೆಗೆದುಕೊಂಡಿದ್ದಾರೆ, ಅವರ ಬಡ್ಡಿ ಮನ್ನಾ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಅಧ್ಯಕ್ಷರು : ಉತ್ತರ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) (ಮಾನ್ಯ ಉನ್ನತ ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ. ಉನ್ನತ ಶಿಕ್ಷಣದ ವ್ಯಾಪ್ತಿಯನ್ನು ಹೆಚ್ಚಿಸಬೇಕೆನ್ನುವುದು ಸರ್ಕಾರದ ಅಪೇಕ್ಷೆಯಾಗಿದೆ. ನಿಮಗೂ ಗೊತ್ತಿರುವಂತೆ ಈಗ 12% ರಿಂದ 15% ಇರುವುದನ್ನು ಮುಂದೆ 20% ರಿಂದ 25% ವರೆಗೂ ಉನ್ನತ ಶಿಕ್ಷಣಕ್ಕೆ ಹೋಗುವಂಥವರನ್ನು ನಾವು ಪ್ರೋತ್ಸಾಹಿಸಬೇಕೆಂದು ಸರ್ಕಾರದ ಅಪೇಕ್ಷೆಯಿದೆ. ಹಾಗಾಗಿ ಹೆಚ್ಚು ಡಿಗ್ರಿ ಕಾಲೇಜುಗಳನ್ನು, ತಾಂತ್ರಿಕ ಕಾಲೇಜುಗಳನ್ನು ಪ್ರಾರಂಭಿಸಿರುವುದು, ಬೇರೆ ಬೇರೆ ಕ್ರಮಗಳನ್ನು ತೆಗೆದುಕೊಂಡಿರುವುದು. ಈಗ ನಾವು 6% ಬಡ್ಡಿವರೆಗೆ ವಿದ್ಯಾರ್ಥಿಗಳು ತುಂಬಬೇಕು, ಉಳಿದ ಎಲ್ಲಾ ಬಡ್ಡಿಯನ್ನು ಸರ್ಕಾರ

ಭರಿಸಿಕೊಳುತ್ತಿದೆ. ಈಗ ಇದರೊಳಗೆರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಶೈಕ್ಷಣಿಕ ಸಾಲಗಳ ಬಡ್ಡಿ ಹಣ ಬಿಡುಗಡೆ ಮಾಡುವ ಬಗ್ಗೆ ಬ್ಯಾಂಕುಗಳ ಪ್ರಸ್ತಾವನೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸಲ್ಲಿಸಿದ್ದು ಪರಿಶೀಲಿಸಿದ ನಂತರ ಬಡ್ಡಿ ಸಹಾಯಧನವನ್ನು ನೇರವಾಗಿ ವಿದ್ಯಾರ್ಥಿಗಳ ಅಕೌಂಟ್‌ಗೆ ಜಮಾ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಈಗಾಗಲೇ 1 ಕೋಟಿ 68 ಲಕ್ಷ ರೂಪಾಯಿಯ ಹಣವನ್ನು ಕೊಟ್ಟಿದ್ದೇವೆ. ಹಣದ ತೊಂದರೆಯಿಲ್ಲ. ಈಗ ಆಡಳಿತಾತ್ಮಕವಾಗಿ ಅವರು ಎಲ್ಲೆಲ್ಲಿ ಎಷ್ಟೆಷ್ಟು ಹಣ ತೆಗೆದುಕೊಂಡಿದ್ದಾರೆ? ಅದಕ್ಕೆ ಎಷ್ಟೆಷ್ಟು ಬಡ್ಡಿ ಕೊಡಬೇಕಾಗುತ್ತದೆ ಎನ್ನುವುದನ್ನು ಸ್ಪಷ್ಟಪಡಿಸಿಕೊಂಡು ಯಾರು ಸಾಲ ತೆಗೆದುಕೊಂಡಿದ್ದಾರೋ ಅವರಿಗೆ ಆ ಬಡ್ಡಿಯನ್ನು ಕೊಡುವುದಕ್ಕೆ ಬೇಕಾದಂಥ ಎಲ್ಲಾ ಕ್ರಮವನ್ನು ತೆಗೆದುಕೊಂಡಿದ್ದೇವೆ. ಎಲ್ಲಾದರೂ ದೋಷಗಳಿದ್ದರೆ, ನ್ಯೂನತೆಗಳಿದ್ದರೆ ಅದನ್ನು ಸರಿಪಡಿಸಿ ವಿದ್ಯಾರ್ಥಿಗಳು ಹೆಚ್ಚಿನ ಶಿಕ್ಷಣ ಪಡೆಯುವುದಕ್ಕೆ ಬೇಕಾದಂಥ ಪ್ರೋತ್ಸಾಹವನ್ನು ಸರ್ಕಾರವಾಗಿ ನಾವು ಕೊಡುತ್ತೇವೆ.

7. ಮಾನ್ಯ ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1) ವಿಷಯ : ಅರಕಲಗೂಡು ಕ್ಷೇತ್ರದ ಹಳ್ಳಿ ಮೈಸೂರಿನಲ್ಲಿರುವ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರ ದುರ್ವರ್ತನೆ ಹಾಗೂ ದಬ್ಬಾಳಿಕೆಯಿಂದ ವಿದ್ಯಾರ್ಥಿಗೆ ತೊಂದರೆಯಾಗುತ್ತಿರುವ ಬಗ್ಗೆ.

ಶ್ರೀ ಎ.ಮಂಜು (ಅರಕಲಗೂಡು) : ಸನ್ಮಾನ್ಯ ಅಧ್ಯಕ್ಷರೆ, ಅರಕಲಗೂಡು ಕ್ಷೇತ್ರದ ಹಳ್ಳಿ ಮೈಸೂರಿನಲ್ಲಿರುವ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರ ದುರ್ವರ್ತನೆ ಹಾಗೂ ದುರ್ನಡತೆಯಿಂದ ಅಲ್ಲಿನ ವಿದ್ಯಾರ್ಥಿಗಳು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದು, ಒಬ್ಬ ವಿದ್ಯಾರ್ಥಿ ಕಿರುಕುಳ ತಾಳಲಾರದೆ ವಿಷ ತೆಗೆದುಕೊಂಡು ಸಾಯಲು ಪ್ರಯತ್ನಿಸಿದ್ದು, ಈ ವಿಚಾರವು ಬಹಳ ಗಂಭೀರವಾಗಿದ್ದು ಈ ವಿಷಯವನ್ನು ತಮ್ಮ ಮುಂದೆ ಮಂತ್ರಿಗಳಿಗೆ ಪ್ರಸ್ತಾಪಿಸಿದ್ದೇನೆ. ಇದಕ್ಕೆ ಈಗಾಗಲೇ ಉತ್ತರವನ್ನು ಕೂಡಾ ಒದಗಿಸಿದ್ದಾರೆ. ನಾನು ಮಾನ್ಯ ಮಂತ್ರಿಗಳನ್ನು ಕೇಳುವುದಿಷ್ಟೇ, ಕಾಲೇಜಿನಲ್ಲಿ ಪ್ರಾಂಶುಪಾಲರು ಈ ರೀತಿ ನಡೆದುಕೊಂಡದ್ದಕ್ಕೆ, ಸರ್ಕಾರ ರಜಾ ಹಾಕಿಸಿರುವುದು ನಿಜವಾಗಿಯೂ ಸರ್ಕಾರ ಒಳ್ಳೆ ಕೆಲಸ ಮಾಡಿದೆ. ಆದರೆ ರಜಾ ಹಾಕಿಸಿದ ಮೇಲೆ 15 ದಿನಗಳ ನಂತರ